# www.karunaduexams.com

ಶಿಶು ಅಭಿವೃದ್ಧಿ ಯೋಜನಾ ಅಧಿಕಾರಿ (CDPO) 7

www.karunaduexams.com

1. ಕಾರ್ಮಿಕರ ಪರಿಹಾರ ಕಾಯಿದೆ (Employees Compensation Act) ಜಾರಿಗೆ ಬಂದ __________?

ಅ) 1921

ಆ) 1923

ಇ) 1934

ಈ) 1941

1923

2. ಯಾವ ಪಂಚವಾರ್ಷಿಕ ಯೋಜನೆಯಲ್ಲಿ "ರಾಷ್ಟ್ರೀಯ ಬಾಲ ಕಾರ್ಮಿಕ ನೀತಿ (National Child Labour Policy)" ಜಾರಿಗೆ ಬಂದಿತು?

ಅ) ಆರನೇ ಪಂಚವಾರ್ಷಿಕ ಯೋಜನೆ

ಆ) ಐದನೇ ಪಂಚವಾರ್ಷಿಕ ಯೋಜನೆ

ಇ) ಏಳನೇ ಪಂಚವಾರ್ಷಿಕ ಯೋಜನೆ

ಈ) ಎಂಟನೇ ಪಂಚವಾರ್ಷಿಕ ಯೋಜನೆ

ಏಳನೇ ಪಂಚವಾರ್ಷಿಕ ಯೋಜನೆ

ರಾಷ್ಟ್ರೀಯ ಬಾಲ ಕಾರ್ಮಿಕ ನೀತಿಯನ್ನು ಕೇಂದ್ರ ಸಚಿವ ಸಂಪುಟ 14ನೇ ಆಗಸ್ಟ 1987 ರಲ್ಲಿ ಏಳನೇ ಪಂಚವಾರ್ಷಿಕ ಯೋಜನೆ ಅವಧಿಯಲ್ಲಿ ಅನುಮೋದಿಸಿತು.

3. 2011 ಜನಗಣತಿ ಪ್ರಕಾರ ಭಾರತದ ಒಟ್ಟು ಜನಸಂಖ್ಯೆಯಲ್ಲಿ ಮಹಿಳೆಯರ ಪಾಲು ______?

ಅ) ಶೇ 51.3

ಆ) ಶೇ 48.6

ಇ) ಶೇ 49.3

ಈ) ಶೇ 47.6

ಶೇ 48.6

2011 ಜನಗಣತಿ ಪ್ರಕಾರ ಭಾರತದ ಒಟ್ಟು ಜನಸಂಖ್ಯೆಯಲ್ಲಿ ಮಹಿಳೆಯರ ಪಾಲು ಶೇ 48.6%. ಇವರಲ್ಲಿ ಶೇ 25.67% ಮಹಿಳೆಯರು ಉದ್ಯೋಗಿಗಳಾಗಿದ್ದಾರೆ.

4. ಶಿಕ್ಷಣ ಹಕ್ಕು ಕಾಯಿದೆ ಪ್ರಕಾರ ವಿಧ್ಯಾರ್ಥಿ- ಶಿಕ್ಷಕ ಅನುಪಾತ ಎಷ್ಟಿರಬೇಕು?

ಅ) 30 : 1

ಆ) 25 : 1

ಇ) 36 : 1

www.karunaduexams.com

ಈ) 40 : 1

30 : 1

ಗಮನಿಸಿ ಶಿಕ್ಷಣ ಹಕ್ಕು ಕಾಯಿದೆ ಪ್ರಕಾರ ಪ್ರತಿ 60 ನೋಂದಾಯಿತ ವಿಧ್ಯಾರ್ಥಿ ಗಳಿಗೆ ಇಬ್ಬರು ಶಿಕ್ಷಕರು ಇರತಕ್ಕದ್ದು. 61-90 ವಿದ್ಯಾರ್ಥಿಗಳಿಗೆ ಮೂವರು, 91-120 ನಾಲ್ಕು, 121-200 ಐದು, 200 ವಿದ್ಯಾರ್ಥಿಗಳು ಮೇಲ್ಪಟ್ಟರೆ 40:1.

5. ಸಂವಿಧಾನದ ಯಾವ ತಿದ್ದುಪಡಿಯ ಅನ್ವಯ 21-A ವಿಧಿಯನ್ನು ಸೇರ್ಪಡೆಗೊಳಿಸಲಾಗಿದೆ?

ಅ) 84ನೇ ತಿದ್ದುಪಡಿ

ಆ) 85ನೇ ತಿದ್ದುಪಡಿ

ಇ) 86ನೇ ತಿದ್ದುಪಡಿ

ಈ) 89ನೇ ತಿದ್ದುಪಡಿ

86ನೇ ತಿದ್ದುಪಡಿ

86ನೇ ತಿದ್ದುಪಡಿ-2002 ಕಾಯಿದೆ ಮೂಲಕ 21-ಎ ವಿಧಿಯನ್ನು ಸೇರ್ಪಡೆಗೊಳಿಸಲಾಗಿದ್ದು, 6 ರಿಂದ 14 ವರ್ಷದೊಳಗಿನ ಮಕ್ಕಳಿಗೆ ಶಿಕ್ಷಣ ಪಡೆಯುವುದನ್ನು ಮೂಲಭೂತ ಹಕ್ಕು ಎಂದು ಘೋಷಿಸಲಾಗಿದೆ.

6. ಈ ಕೆಳಗಿನ ಯಾವ ಯೋಜನೆಯನ್ನು ಮಹಿಳೆಯರಿಗೆ ಕಿರು ಸಾಲ ವಿತರಸಿರುವ ಉದ್ದೇಶದೊಂದಿಗೆ ಜಾರಿಗೆ ತರಲಾಗಿದೆ?

ಅ) ರಾಷ್ಟ್ರೀಯ ಮಹಿಳಾ ಕೋಶ್

ಆ) ಮಹಿಳಾ ಸಮೃದ್ಧಿ ಯೋಜನೆ

ಇ) ಇಂದಿರಾ ಮಹಿಳಾ ಯೋಜನೆ

ಈ) ಜವಹಾರ್ ರೋಜ್ಗಾರ್ ಯೋಜನೆ

ಮಹಿಳಾ ಸಮೃದ್ಧಿ ಯೋಜನೆ

ಸ್ತ್ರೀಶಕ್ತಿ ಸಂಘಗಳಿಗೆ ಕಿರು ಸಾಲವನ್ನು ವಿತರಿಸಿ ಮಹಿಳೆಯರು ಸ್ವಉದ್ಯೋಗವನ್ನು ಕೈಗೊಳ್ಳಲು ಪ್ರೋತ್ಸಾಹಿಸಲು ಅಕ್ಟೋಬರ್ 2, 1993 ರಲ್ಲಿ ಮಹಿಳಾ ಸಮೃದ್ಧಿ ಯೋಜನೆಯನ್ನು ಜಾರಿಗೆ ತರಲಾಗಿದೆ. ಈ ಯೋಜನೆಯಡಿ ಸ್ತ್ರೀಶಕ್ತಿ ಸಂಘದ ಪ್ರತಿ ಸದಸ್ಯರಾಗಿ ರೂ 50,000/ ವರೆಗೆ ಸಾಲವನ್ನು ನೀಡಲಾಗುವುದು.

www.karunaduexams.com

7. ಸಾರ್ವಜನಿಕ ಹಿತಾಸಕ್ತಿ ಅರ್ಜಿ(PIL)ಗೆ ಸಂಬಂಧಿಸಿದಂತೆ ಕೆಳಗಿನ ಹೇಳಿಕೆಗಳನ್ನು ಗಮನಿಸಿ:

I)ನ್ಯಾ. ಪಿ.ಎನ್.ಭಗವತಿ ಹಾಗೂ ಕೃಷ್ಣಾ ಐಯ್ಯರ್ ಅವರು ಪಿಐಎಲ್ ಅನ್ನು ಅನುಮೋದಿಸಿದ ಮೊದಲಿಗರು

II) ಹುಸ್ನಾರ್ ಖಾತೂನ್ v/s ಸ್ಟೇಟ್ ಆಫ್ ಬಿಹಾರ್ ಭಾರತದ ಮೊದಲ ಪಿಐಎಲ್ ಪ್ರಕರಣ

III) ಪಿಐಎಲ್ ಅನ್ನು ಕೇವಲ ಹೈಕೋರ್ಟ್ನಲ್ಲಿ ಮಾತ್ರ ಸಲ್ಲಿಸಬಹುದು

ಮೇಲಿನ ಯಾವ ಹೇಳಿಕೆ/ಹೇಳಿಕೆಗಳು ಸರಿಯಾಗಿವೆ?

ಅ) I & II

ಆ) II & III

ಇ) I & III

ಈ) I, II & III

ಮೊದಲ ಎರಡು ಹೇಳಿಕೆಗಳು ಸರಿಯಾಗಿವೆ. ಮೂರನೇ ಹೇಳಿಕೆ ತಪ್ಪು ಏಕೆಂದರೆ ಪಿಐಎಲ್ ಅನ್ನು ಹೈಕೋರ್ಟ್ ಅಲ್ಲದೇ ಸುಪ್ರೀಂಕೋರ್ಟಿನಲ್ಲಿ ಸಹ ದಾಖಲಿಸಬಹುದು. ಭಾರತ ಸಂವಿಧಾನದ 39ಎ (ಸಾಮಾನ್ಯ ನ್ಯಾಯವನ್ನು ಪ್ರೋತ್ಸಾಹಿಸುವುದು ಮತ್ತು ಬಡವರಿಗೆ ಉಚಿತ ಕಾನೂನು ನೆರವು ನೀಡುವುದು) ವಿಧಿಗೆ ಪೂರಕವಾಗಿ ಪಿಐಎಲ್ ಪರಿಕಲ್ಪನೆ ಜಾರಿಗೆ ಬಂದಿದೆ.

8. 1898 ರಲ್ಲಿ ಸಮಾಜ ಸೇವೆಯ ಮೊದಲ ಶಾಲೆಯನ್ನು (First School of Social Work) ಎಲ್ಲಿ ತೆರೆಯಲಾಯಿತು?

ಅ) ಲಂಡನ್

ಆ) ನ್ಯೂಯಾರ್ಕ್

ಇ) ಬರ್ಲಿನ್

ಈ) ಕ್ಯಾಲಿಫೋರ್ನಿಯಾ

ನ್ಯೂಯಾರ್ಕ್

9. "ಸೋಶಿಯಲ್ ಡಯಾಗ್ನೊಸಿಸ್ (Social Diagnosis)" ಪುಸ್ತಕದ ಲೇಖಕರು ________?

ಅ) ಸ್ಟುವರ್ಟ್

ಆ) ಮೇರಿ ರಿಚ್ಮಂಡ್

ಇ) ಪಿಯರ್ಲನ್ ಮನ್

ಈ) ಹ್ಯಾಮಿಲ್ಟನ್

ಮೇರಿ ರಿಚ್ಮಂಡ್

www.karunaduexams.com

1917 ರಲ್ಲಿ ಮೇರಿ ರಿಚ್ಮಂಡ್ ಅವರು ತಮ್ಮ ಮೊದಲ ಪುಸ್ತಕ "ಸೋಶಿಯಲ್ ಡಯಾಗ್ನೊಸಿಸ್" ಬರೆದರು. ಈ ಪುಸ್ತಕದಲ್ಲಿ ಕ್ಲೈಂಟ್ ಗಳ ಸಮಸ್ಯೆಯನ್ನು ಅರ್ಥೈಸಿಕೊಳ್ಳಲು ಹಾಗೂ ನಿಭಾಯಿಸಲು ವ್ಯವಸ್ಥಿತ ವಿಧಾನದ ಬಗ್ಗೆ ಮೊದಲ ಬಾರಿಗೆ ತಿಳಿಸಲಾಯಿತು.

10. ಈ ಕೆಳಗಿನ ಯಾರು ಭಾರತದಲ್ಲಿ "ಸೋಶಿಯಲ್ ಸರ್ವೀಸ್ ಲೀಗ್ (Social Service League)" ಅನ್ನು ಸ್ಥಾಪಿಸಿದರು?
ಅ) ಎನ್. ಎಂ. ಜೋಶಿ
ಆ) ಎನ್.ಎಂ. ರಾಯ್
ಇ) ದಾದಾಬಾಯಿ ನರೋಜಿ
ಈ) ದೋರಬ್ಜಿ ಟಾಟಾ
ಎನ್. ಎಂ. ಜೋಶಿ
ಎನ್.ಎಂ.ಜೋಶಿ ಅವರು 1911 ರಲ್ಲಿ "ಸೋಶಿಯಲ್ ಸರ್ವೀಸ್ ಲೀಗ್ (Social Service League)" ಅನ್ನು ಸ್ಥಾಪಿಸಿದರು.

www.karunaduexams.com